# ಜವಾರಿ ಭಾಷೆಯ ಅಮೋಲ್‌ನ ಉಡಾಳ

**ನಿರ್ದೇಶಕ ಯೋಗರಾಜ ಭಟ್ಟರ ಗರಡಿಯಲ್ಲಿ ಪಳಗಿರುವ ಅಮೋಲ್ ಪಾಟೀಲ್, 'ಉಡಾಳ' ಸಿನಿಮಾ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಹೆಜ್ಜೆ ಇಟ್ಟಿದ್ದಾರೆ. ಇದೇ ನ.14ಕ್ಕೆ ಸಿನಿಮಾ ಬಿಡುಗಡೆಯಾಗುತ್ತಿದ್ದು, ಸಿನಿಮಾ ನಿರ್ದೇಶನದ ಚೊಚ್ಚಲ ಅನುಭವಗಳನ್ನು ಹಂಚಿಕೊಂಡಿದ್ದಾರೆ.**

■ **ಸುಮಲತಾ ಎನ್**

◆ 'ಉಡಾಳ' ಸಿನಿಮಾದಲ್ಲಿ ನೋಡುಗರು ಹೊಸತೇನನ್ನು ನಿರೀಕ್ಷಿಸಬಹುದು?

'ಉಡಾಳ' ನನ್ನ ಮೊದಲ ಸಿನಿಮಾ. ನೋಡುಗರಿಗೆ ಏನಾದರೂ ಹೊಸತು ನೀಡಬೇಕೆಂಬ ಆಲೋಚನೆಯಲ್ಲಿಯೇ ರೂಪುಗೊಂಡ ಸಿನಿಮಾ ಇದು. ಮೊದಲನೆಯದಾಗಿ, ಒಬ್ಬ ಪ್ರೇಕ್ಷಕ ಥಿಯೇಟರ್‌ಗೆ ಬಂದಾಗ ಸಿನಿಮಾವನ್ನು ಅನುಭವಿಸಬೇಕು. ನೋಡುಗರಿಗೆ ಸಿನಿಮಾದಿಂದ ಮನರಂಜನೆ ಸಿಗಬೇಕು, ಖುಷಿ ಆಗಬೇಕು. ಒಟ್ಟಾರೆ ಅವರು ಸಿನಿಮಾದಲ್ಲಿ ಒಳಗೊಳ್ಳಬೇಕು ಎನ್ನುವುದು ನನ್ನ ಆಲೋಚನೆ. ಎರಡನೆಯದಾಗಿ, ಮುಖ್ಯವಾಹಿನಿಯ ಸಿನಿಮಾಗಳಲ್ಲಿ ಸಾಮಾನ್ಯವಾಗಿ ಉತ್ತರ ಕರ್ನಾಟಕ ಭಾಷೆಯನ್ನು ಒಂದು ಹಾಸ್ಯದ ದೃಶ್ಯಕ್ಕೋ, ಬೈಗುಳಕ್ಕೋ ಅಥವಾ ಒಂದು ಪಾತ್ರಕ್ಕೋ ಸೀಮಿತಗೊಳಿಸುತ್ತಾರೆ. ಸಿನಿಮಾಗೆ ಒಂದು 'ಫ್ಲೇವರ್'ನಂತಷ್ಟೇ ಅದು ಕಾಣಿಸುತ್ತದೆ. ಆದರೆ ಉತ್ತರ ಕರ್ನಾಟಕದ ಭಾಷೆಯನ್ನು ಪೂರ್ಣವಾಗಿ ಬಳಸಿಕೊಂಡೇ ಸಿನಿಮಾ ರೂಪಿಸಲು ಸಾಧ್ಯ ಎಂದು ನನಗೆ ಅನ್ನಿಸಿತ್ತು. ಇಲ್ಲಿಯವರೆಗೂ ಅಂಥ ಪ್ರಯತ್ನ ನಡೆದದ್ದು ವಿರಳ. ನಾನು ಈ ನಿಟ್ಟಿನಲ್ಲಿ ಪ್ರಯತ್ನಿಸಿದೆ. ಸಿನಿಮಾದಲ್ಲಿ ಹಾಸ್ಯ, ಉತ್ತರ ಕರ್ನಾಟಕದ ಸೊಗಡನ್ನು ಪ್ರಸ್ತುತಪಡಿಸಿದ್ದೇನೆ. ಇದು ನೋಡುಗರಿಗೆ ಹೊಸ ಅನುಭವ ನೀಡುತ್ತದೆ.

◆ ನಿರ್ದೇಶನದೆಡೆಗೆ ಮನಸ್ಸು ಹೊರಳಿದ್ದು ಹೇಗೆ?

ನನ್ನೂರು ವಿಜಯಪುರ. ಬೆಂಗಳೂರು, ಮುಂಬೈನಲ್ಲಿ ಓದಿದೆ. ಅನಿಮೇಷನ್ ಸಿನಿಮಾ ಒಲವಿನಿಂದ ಪದವಿಯಲ್ಲಿ ಅನಿಮೇಷನ್ ವಿಎಫ್‌ಎಕ್ಸ್ ಫಿಲ್ಮ್ ಮೇಕಿಂಗ್ ವಿಷಯ ಆರಿಸಿಕೊಂಡೆ. ಆ ಸಮಯದಲ್ಲಿ ಪಠ್ಯದ ಭಾಗವಾಗಿ ಕಿರುಚಿತ್ರ ಮಾಡಬೇಕಿತ್ತು. ಹಾಗೆ ಕಿರುಚಿತ್ರ ಮಾಡುತ್ತಾ ಅನಿಮೇಷನ್‌ಗಿಂತ ಈ ಸಿನಿಮಾಗಳ ಮೇಲೆ ಒಲವು ಹೆಚ್ಚಾಯಿತು. ನನ್ನ ತಾಯಿ ಕಲಾವಿದೆ. ಅವರೊಂದಿಗೆ ನಾಟಕಗಳಿಗೆ ಹೋಗುತ್ತಿದ್ದಾಗ ಬ್ಯಾಕ್‌ಸ್ಟೇಜ್‌ನಲ್ಲಿ ಕೆಲವು ಕೆಲಸಗಳನ್ನು ಮಾಡುತ್ತಿದ್ದೆ. ಆಗೆಲ್ಲಾ ಖುಷಿಯಾಗುತ್ತಿತ್ತು, ಜನರು ನನ್ನ ಕೆಲಸವನ್ನು ಇಷ್ಟಪಡುತ್ತಿದ್ದಾರೆ ಎಂದು. ಆ ಚಿಕ್ಕ ಚಿಕ್ಕ ಖುಷಿಗಳು ನನ್ನನ್ನು ಸಿನಿಮಾಗೆ ಹತ್ತಿರವಾಗಿಸಿದವು.



# ಅಮೃತಾ ಹೊಸ ಶೇಡ್..

'ಹಲ್ಕಾ ಡಾನ್' ಮೂಲಕ ಬಹು ದಿನಗಳ ನಂತರ ಸೆಟ್‌ಗೆ ಮರಳಿರುವ ನಟಿ ಅಮೃತಾ ಅಯ್ಯಂಗಾರ್, ಸಿನಿಮಾದಲ್ಲಿ ಪ್ರಮೋದ್ ಜೊತೆ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಈ ಸಿನಿಮಾ ಸ್ಕ್ರಿಪ್ಟ್, ಹೊಸ ರೀತಿಯ ನಿರೂಪಣೆಯಿಂದ ತಮ್ಮ ಗಮನಸೆಳೆದಿರುವುದಾಗಿ ಹೇಳಿರುವ ಅವರು, ನಟ ಉಪೇಂದ್ರ ಶೈಲಿಯ ಕಥಾ ನಿರೂಪಣೆ ಈ ಸಿನಿಮಾಗಿದ್ದು, ತಮ್ಮಲ್ಲಿ ಆಸಕ್ತಿ ಕೆರಳಿಸಿರುವುದಾಗಿ ಹೇಳಿದ್ದಾರೆ. ಜೊತೆಗೆ, ಸಿನಿಮಾಗಳ ಆಯ್ಕೆಯ ಕುರಿತ ತಮ್ಮ ಅನಿಸಿಕೆಯನ್ನು ತೆರೆದಿಟ್ಟಿದ್ದಾರೆ.

'ಕಳೆದ ಎಂಟು ತಿಂಗಳಿನಲ್ಲಿ ನಾನು ಯಾವುದೇ ಸಿನಿಮಾ ಚಿತ್ರೀಕರಣದಲ್ಲಿ ತೊಡಗಿಕೊಂಡಿರಲಿಲ್ಲ. ಈ ಅವಧಿಯಲ್ಲಿ ನನಗೆ ಸಿನಿಮಾ ಅವಕಾಶ ಬಂದಿಲ್ಲ ಎಂದರ್ಥವಲ್ಲ. ಅವನ್ನು ಆರಿಸಿಕೊಳ್ಳಬೇಕೆಂಬುದಕ್ಕೆ ಸೂಕ್ತ ಕಾರಣಗಳು ಸಿಗಲಿಲ್ಲವಷ್ಟೆ. ಆ ಸಮಯದಲ್ಲಿ ಕೆಲವು ಪ್ರಶ್ನೆಗಳನ್ನು ನನಗೆ ನಾನೇ ಕೇಳಿಕೊಂಡಿದ್ದೆ. ಕೇವಲ ತೆರೆ ಮೇಲೆ ಕಾಣಿಸಿಕೊಳ್ಳಬೇಕು ಎಂಬ ಕಾರಣಕ್ಕೆ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕಾ? ಕಥೆಯ ಬಗ್ಗೆ ಪ್ಯಾಶನೇಟ್ ಆಗಿ ಮಾಡಬೇಕಾ? ಎಂದು. ನನ್ನ ನಿರ್ಧಾರಕ್ಕೆ ನಾನು ಬದ್ಧಳಾಗಿದ್ದೆ. 'ಹಲ್ಕಾ ಡಾನ್' ಸಿನಿಮಾ ಅವಕಾಶ ಸರಿಯಾದ ಸಮಯಕ್ಕೆ ನನಗೆ ದೊರೆಯಿತು. ಈ ಸಿನಿಮಾದಲ್ಲಿ ನನ್ನ ಪಾತ್ರಕ್ಕೆ ಶೇಡ್‌ಗಳಿವೆ. ಈ ಸಿನಿಮಾ ಮಾಡಲು ಇದು ಬಹು ಮುಖ್ಯ ಕಾರಣ' ಎಂದು ವಿವರಿಸಿದ್ದಾರೆ.

ಸಿನಿಮಾಗೆ ಪ್ರೊಮೋಷನ್ ಕಾರ್ಯ ಎಷ್ಟು ಮುಖ್ಯ ಎಂಬುದರ ಕುರಿತು ಸಂದರ್ಶನವೊಂದರಲ್ಲಿ ಮಾತನಾಡಿರುವ ಅವರು, 'ನಿಮ್ಮ ಕೆಲಸ ಪ್ರೇಕ್ಷಕರನ್ನು ತಲುಪಬೇಕು ಎಂದರೆ ಪ್ರೊಮೋಷನ್ ಮಾಡಲೇಬೇಕು. ಸಿನಿಮಾ ದೊಡ್ಡದಿರಲಿ, ಚಿಕ್ಕದಿರಲಿ, ಪ್ರೊಮೋಷನ್ ಸಿನಿಮಾ ಗೆಲುವಿಗೆ ಬಹಳ ಮುಖ್ಯ ಸಂಗತಿ' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ■